# ಕನ್ನಡ ಸಾಹಿತ್ಯ ಪತ್ರಿಕೆ ಮತ್ತು ಮುದ್ರಣ ಕ್ಷೇತ್ರಕ್ಕೆ ಮಿಷನರಿಗಳ ಕೊಡುಗೆ

**ವೇಣುಗೋಪಾಲ ಎಂ.[1] & ಅರುಣ್ ಕುಮಾರ್ ಎಂ.ಪಿ.[2]**

[1]ಆಯ್ಕೆ ಶ್ರೇಣಿ ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು, ಕೋಲಾರ.

[2]ಆಯ್ಕೆ ಶ್ರೇಣಿ ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ. ಆರ್. ಪೇಟೆ, ಮಂಡ್ಯ.

**DOI: https://doi.org/10.5281/zenodo.17960197**

## ABSTRACT:

ಪ್ರಸ್ತುತ ಲೇಖನವು ಕನ್ನಡ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಮುದ್ರಣ ಕ್ಷೇತ್ರಕ್ಕೆ ಕ್ರೈಸ್ತ ಮಿಷನರಿಗಳು (Christian Missionaries) ನೀಡಿದ ಮಹತ್ವದ ಕೊಡುಗೆಯನ್ನು ವಿಶ್ಲೇಷಿಸುತ್ತದೆ. 18–19ನೇ ಶತಮಾನದಲ್ಲಿ, ತಮ್ಮ ಮತ ಪ್ರಚಾರದ ಉದ್ದೇಶಕ್ಕಾಗಿ ಭಾರತಕ್ಕೆ ಬಂದ ಇವರು, ಮೊದಲು ಮುದ್ರಣ ಯಂತ್ರಗಳನ್ನು (Printing Press) ಪರಿಚಯಿಸಿದರು. ಇದರ ಪರಿಣಾಮವಾಗಿ, ಹಿಂದೆ ರಾಜಾಶ್ರಯ ಮತ್ತು ಧರ್ಮಗಳನ್ನು ಅವಲಂಬಿಸಿದ್ದ ಸಾಹಿತ್ಯವು ಜನಸಾಮಾನ್ಯರನ್ನು ತಲುಪಲು ಸಾಧ್ಯವಾಯಿತು.

ಮಿಷನರಿಗಳಾದ ಜಾನ್ ಗ್ಯಾರೆಟ್, ಬಿ. ಎಲ್. ರೈಸ್, ಮತ್ತು ಫರ್ಡಿನ್ಯಾಂಡ್ ಕಿಟೆಲ್ ಅವರು ಪ್ರಾಚೀನ ಕನ್ನಡ ಹಸ್ತಪ್ರತಿಗಳು, ಶಾಸನಗಳು ಮತ್ತು ಗ್ರಂಥಗಳನ್ನು (ಕವಿರಾಜಮಾರ್ಗ, ಶಬ್ದಕೋಶಗಳು) ಮುದ್ರಣ ರೂಪಕ್ಕೆ ತರುವ ಮೂಲಕ ಗ್ರಂಥ ಸಂಪಾದನೆಗೆ ಅಡಿಪಾಯ ಹಾಕಿದರು. ಬಾಸೆಲ್ ಮಿಷನ್‌ನ ಹರ್ಮನ್ ಮೋಗ್ಲಿಂಗ್ ಅವರು 1843 ರಲ್ಲಿ ಕನ್ನಡದ ಪ್ರಥಮ ಪತ್ರಿಕೆಯಾದ 'ಮಂಗಳೂರು ಸಮಾಚಾರ' ವನ್ನು ಪ್ರಾರಂಭಿಸಿದರು. ಈ ಬೆಳವಣಿಗೆಯು ಖಾಸಗಿ ವ್ಯಕ್ತಿಗಳಿಗೂ ಸ್ಫೂರ್ತಿ ನೀಡಿ, 'ಕರ್ನಾಟಕ ಪ್ರಕಾಶಿಕಾ', 'ಕರ್ನಾಟಕ ಕಾವ್ಯ ಮಂಜರಿ' ಮುಂತಾದ ಸಾಹಿತ್ಯ ಪತ್ರಿಕೆಗಳ ಉದಯಕ್ಕೆ ಕಾರಣವಾಯಿತು, ಮತ್ತು ಇದು ಹೊಸಗನ್ನಡ ಸಾಹಿತ್ಯದ ಸೃಷ್ಟಿಗೆ ಪ್ರಮುಖ ವೇದಿಕೆಯಾಯಿತು.

## KEYWORDS:

ಕ್ರೈಸ್ತ ಮಿಷನರಿಗಳು, ಮುದ್ರಣ ಕ್ಷೇತ್ರ, ಕನ್ನಡ ಪತ್ರಿಕೋದ್ಯಮ, ಗ್ರಂಥ ಸಂಪಾದನೆ, ಮಂಗಳೂರು ಸಮಾಚಾರ.

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಮತ್ತು ಮುದ್ರಣ ಮಾಧ್ಯಮಗಳು ಒಂದಕ್ಕೊಂದು ಸಖ್ಯ ಬೆಳೆಸಿ ಕ್ರಿಯಾಶೀಲವಾಗಿ ಮುನ್ನಡೆಯುತ್ತಿವೆ. ಸಾಹಿತ್ಯದ ಸಾರ್ಥಕತೆಯು ಸಹೃದಯನನ್ನು ತಲುಪಿದಾಗ ಮಾತ್ರವೇ ಸಾಧ್ಯ. ಸಾಹಿತ್ಯ ಸಹೃದಯನನ್ನು ತಲುಪದೇ ಹೋದಲ್ಲಿ ಅದಕ್ಕೆ ಅರ್ಥವೇ ಇರುವುದಿಲ್ಲ. ಆಧುನಿಕ ಜಗತ್ತಿನಲ್ಲಿ ಸಾಹಿತ್ಯ ಮತ್ತು ಕಲೆಗಳನ್ನು ಸಹೃದಯನಿಗೆ ತಲುಪಿಸುವಲ್ಲಿ ಸಮೂಹ ಮಾಧ್ಯಮಗಳು ಅದರಲ್ಲಿಯೂ ಪತ್ರಿಕೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ.

ಪ್ರಾಚೀನ ಕನ್ನಡ ಸಂದರ್ಭದಲ್ಲಿ ಸಾಹಿತ್ಯವು ರಾಜಾಶ್ರಯ ಮತ್ತು ಧರ್ಮಗಳನ್ನು ಆಶ್ರಯಿಸಿ ಬೆಳೆದು ಬಂದಿತು. ಕೀರ್ತಿಪ್ರಿಯ ಆಶ್ರಯಶೀಲ ರಾಜರು ಸಾಹಿತ್ಯವನ್ನು ಪೋಷಿಸಿ ಬೆಳೆಸಿದರು. ಮುದ್ರಣ ಸೌಲಭ್ಯವೇ ಇಲ್ಲದ ಕಾಲದಲ್ಲಿ ಲಿಪಿಕಾರರನ್ನು ಗೊತ್ತು ಮಾಡಿ ಕವಿಗಳ ಕೃತಿಗಳನ್ನು ಮುಖ್ಯವಾಗಿ ಧಾರ್ಮಿಕ ಕೃತಿಗಳನ್ನು ಪ್ರತಿ ಮಾಡಿಸಿ ಹಂಚುವ ಮೂಲಕ ಸಾಹಿತ್ಯವನ್ನು ಪ್ರಸಾರ ಮಾಡಿದರು. ಅತ್ತಿಮಬ್ಬೆ ಪೊನ್ನ ಕವಿಯ ಶಾಂತಿಪುರಾಣದ 1001

ಪ್ರತಿಗಳನ್ನು ಮಾಡಿಸಿ ಸಹೃದಯರಿಗೆ ತಲುಪಿಸಿದ್ದನ್ನು ನಾವು ನೋಡಬಹುದು. ಮಧ್ಯಕಾಲೀನ ಕನ್ನಡ ಸಂದರ್ಭದಲ್ಲಿ ರಚನೆಗೊಂಡ ವಚನ, ಷಟ್ಪದಿ, ಸಾಂಗತ್ಯ ಕೃತಿಗಳು ಜನರ ಬಾಯಲ್ಲಿ ಪುರಾಣ ಕಥೆಗಳಾಗಿ ನಲಿದವು. ಕುಮಾರವ್ಯಾಸನ ಗದುಗಿನ ಭಾರತ ಮನೆ ಮನೆಗಳಲ್ಲಿ ನಿನದಿಸುತ್ತಿದ್ದ ಕಾಲವೊಂದಿತ್ತು. ರಾಮಾಯಣ, ಮಹಾಭಾರತದ ಕಥೆಗಳು ನಾಟಕ ಮಾಧ್ಯಮದ ಮೂಲಕ ಜನ ಮನ ಸೆಳೆದವು.

ಯಾವುದೇ ಮಾಧ್ಯಮಗಳು ಹೊಸದಾಗಿ ಬಂದಾಗ ಈಗಾಗಲೇ ಚಾಲ್ತಿಯಲ್ಲಿದ್ದ ಮಾಧ್ಯಮಗಳು ಮತ್ತೆ ಹೊಸರೂಪ ಪಡೆದುಕೊಳ್ಳುತ್ತಾ ಸಾಗುತ್ತವೆ. ಹಾಗಾಗಿ ಕನ್ನಡ ಸಾಹಿತ್ಯದಲ್ಲಿದ್ದ ಮೌಖಿಕ/ಜನಪದ ಮಾಧ್ಯಮವಾಗಲಿ ಅಥವಾ ಓಲೆಗರಿ/ತಾಳೆಗರಿ ಪ್ರತಿ ಮಾಡುವ ಪದ್ಧತಿ ಇದ್ದರೂ ಬೆರಳೆಣಿಕೆಯಷ್ಟಿದ್ದಿದ್ದರಿಂದ ಹೆಚ್ಚಿನ ಜನರನ್ನು ತಲುಪುತ್ತಿರಲಿಲ್ಲ. ಹಾಗಾಗಿ ಇಲ್ಲಿ ತಾಂತ್ರಿಕ ಆವಿಷ್ಕಾರಕ್ಕೆ ಒಳಗಾಗುವ ಅವಶ್ಯಕತೆ ಇತ್ತು. ಅದೇ ಸಂದರ್ಭದಲ್ಲಿ ಸುಮಾರು 18–19ನೇ ಶತಮಾನದ ಹೊತ್ತಿಗೆ ಮುದ್ರಣಯಂತ್ರ, ಬರಹದ ಹಾಳೆ, ಪುಸ್ತಕಗಳ ಆವಿಷ್ಕಾರವಾಯಿತು. ಇವುಗಳನ್ನು ಸಂರಕ್ಷಿಸುವ ಮತ್ತು ಪುನರ್ ಮುದ್ರಣಕ್ಕೆ ಒಳಪಡಿಸಲು ಅವಕಾಶಗಳಿದ್ದವು. ಇವು ಹೆಚ್ಚು ಪ್ರಬುದ್ಧಮಾನಕ್ಕೆ ಬಂದವು.

ಪ್ರಸ್ತುತ ಲೇಖನವು ಕ್ರೈಸ್ತ ಮಿಷನರಿಗಳು ಕನ್ನಡ ಸಾಹಿತ್ಯ, ಪತ್ರಿಕೆ ಮತ್ತು ಮುದ್ರಣ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಬಗ್ಗೆ ಚರ್ಚಿಸಲಾಗುತ್ತದೆ. ಮೊಟ್ಟಮೊದಲಿಗೆ ಮುದ್ರಣಯಂತ್ರವನ್ನು ಜರ್ಮನಿಯ ಜಾನ್ ಗುಟೆನ್‌ಬರ್ಗ್ 1439ರಲ್ಲಿ ಶೋಧಿಸಿದನು. ಪ್ರಕಟವಾದ ಮೊದಲ ಗ್ರಂಥ 1457ರಲ್ಲಿ ಯುರೋಪಿನಲ್ಲಿ ಬೈಬಲ್ ಪ್ರಕಟಿಸಲಾಯಿತು. ಭಾರತದ ಮಟ್ಟಿಗೆ ಹೇಳುವುದಾದರೆ 1526ರಲ್ಲಿ ಮುದ್ರಣಯಂತ್ರ ಬಂದದ್ದು. ''ಭಾರತದಲ್ಲಿ ಮೊದಲು ಮುದ್ರಣ ಪ್ರಾರಂಭವಾದದ್ದು ಕ್ರೈಸ್ತ ಮತ್ತು ಪೋರ್ಚುಗೀಸ್ ಮಿಷನರಿಗಳಿಂದ. ಕ್ರೈಸ್ತ ಮತ ಪ್ರಚಾರಕ್ಕಾಗಿ ಬಂದ ಇವರು ಮೊದಲು ಇಲ್ಲಿ ಕಲ್ಲಚ್ಚಿನ ಮುದ್ರಣವನ್ನು ಬೆಳಕಿಗೆ ತಂದರು. ತದನಂತರದಲ್ಲಿ ಅಚ್ಚುಮೊಳೆಗಳ ಮುದ್ರಣವನ್ನು ಆರಂಭಿಸಿದರು.

ಹೊಸಗನ್ನಡದ ಅರುಣೋದಯ ಸಮಯದಲ್ಲಿ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿಯಾಗಿದ್ದರೂ ಬಹುತೇಕ ಮಿಷನರಿಗಳು ದಕ್ಷಿಣ ಭಾಗದ ಭಾಷೆಯನ್ನು ಕಲಿತು ಸಾಹಿತ್ಯ ಕೃಷಿಯನ್ನು ಮಾಡಿದರು. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಿಷನರಿಗಳನ್ನು ಕುರಿತು ಬರೆಯುವಾಗ ಬಿ. ಎಂ. ಶ್ರೀಯವರು ಕ್ರೈಸ್ತ ಪಾದ್ರಿಗಳ ಸೇವೆಯನ್ನು ಬಹು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಇವರು ಮೊದಲು ಪ್ರಾಚೀನ ಹಸ್ತಪ್ರತಿ, ತಾಳೆಗರಿ, ಶಾಸನಗಳ ಶೋಧನೆಯ ಮೂಲಕ ಕನ್ನಡ ಸಂಶೋಧನೆಗೆ ಅಡಿಪಾಯ ಹಾಕಿದರು. ಕನ್ನಡ ಕವಿಗಳ ಕೃತಿಗಳನ್ನು ಮುದ್ರಣ ರೂಪಕ್ಕೆ ತಂದರು, ಶಿಕ್ಷಣ ಕ್ಷೇತ್ರದಲ್ಲಿ ದಾಪುಗಾಲಿಟ್ಟರು. ಹಲವಾರು ಮಿಷನರಿಗಳು ಭಾಷಾ ಚಾತುರತೆಯನ್ನು ಹೊಂದಿ ಶಬ್ದಕೋಶವನ್ನು ರಚಿಸಿದರು.

ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನವು ಭಾರತದಲ್ಲಿ ಬದಲಾವಣೆಯ ಪರ್ವಕಾಲವಾಗಿತ್ತು. ಈ ಸಂದರ್ಭದಲ್ಲಿ ದೇಶದೆಲ್ಲೆಡೆ ಅಚ್ಚುಕೂಟಗಳು, ವೃತ್ತ ಪತ್ರಿಕೆಗಳು ಪ್ರಾರಂಭವಾದವು.

ತದನಂತರದಲ್ಲಿ ಮೈಸೂರು ಸಂಸ್ಥಾನದ ಸರ್ಕಾರಿ ಮುದ್ರಣಾಲಯವು ಕ್ರಿ. ಶ. 1840ರ ಸುಮಾರಿಗೆ ಜಾನ್ ಗ್ಯಾರೆಟ್‌ನ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಪ್ರಾಚೀನ ಕಾವ್ಯಗಳು, ಕನ್ನಡ ಶಾಸನಗಳು ಮುದ್ರಣಕ್ಕೆ ಅಣಿಯಾದವು. 'ಹಿತಬೋಧಿನೀ' ಎಂಬ ಸುಪ್ರಸಿದ್ಧ ಪತ್ರಿಕೆಯು ಸರ್ಕಾರಿ ಅಚ್ಚುಕೂಟದಿಂದಲೇ ಮುದ್ರಣಗೊಂಡು ಹೊರಬಂದಿತ್ತು. ಅಷ್ಟೇ ಅಲ್ಲದೆ ಮುಮ್ಮಡಿ

ಕೃಷ್ಣರಾಜರ ಹೆಸರಿನಲ್ಲಿ ಕೆಲವು (ಸಂಖ್ಯಾರತ್ನ ಕೋಶ ಮತ್ತು ಚತುರಂಗಸಾರಸರ್ವಸ್ವ) ಕೃತಿಗಳು ಕೂಡ ಅಚ್ಚಾದವು.

ಜರ್ಮನಿಯಿಂದ ಭಾರತಕ್ಕೆ ಬಂದಂತಹ ಮಿಷನರಿಗಳು ಹಲವಾರು. ಕನ್ನಡ ಭಾಷೆಯ ಗ್ರಂಥ ಸಂಪಾದನೆ ಮತ್ತು ಮುದ್ರಣಕ್ಕೆ ಹೆಚ್ಚಾಗಿ ದುಡಿದ ಮಿಷನರಿಗಳೆಂದರೆ, ಜೆಸ್ಯೂಟ್ ಮಿಷನ್ ಸಂಸ್ಥೆ, ವೆಸ್ಲಿಯನ್, ಬಾಸೆಲ್ ಮಿಷನರಿಗಳ ಕೊಡುಗೆ ಅಪಾರವಾದದ್ದು. ಲಂಡನ್ ಮಿಷನ್ ಸಂಸ್ಥೆಯಿಂದ ಬಂದಂತಹ ಹ್ಯಾಂಡ್ಸ್ ಮತ್ತು ರೀವ್, ಬಿ. ಎಚ್. ರೈಸ್, ಜಾನ್ ಗ್ಯಾರೆಟ್, ಹೆನ್ರಿ ಹೇಗ್. ಬಾಸೆಲ್ ಮಿಷನ್ – ಹರ್ಮನ್ ಮೋಗ್ಲಿಂಗ್, ಫರ್ಡಿನಾಂಡ್ ಕಿಟೆಲ್, ಮೊದಲಾದವರನ್ನು ಸ್ಮರಿಸಿಕೊಳ್ಳಬೇಕು.

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಮಿಷನರಿಗಳ ಸೇವೆಯನ್ನು ಈ ಮುಂದಿನಂತೆ ಗುರುತಿಸಬಹುದು.

1. ಕನ್ನಡದ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳ ಮುದ್ರಣದ ಕಾರ್ಯ ಕೈಗೊಂಡು ಗ್ರಂಥಸಂಪಾದನ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಉದಾಹರಣೆಗೆ, ಕವಿರಾಜಮಾರ್ಗ, ಭಾಷಾಭೂಷಣ, ಕರ್ನಾಟಕ ಶಬ್ದಾನುಶಾಸನ, ಮೊದಲಾದ ಕೃತಿಗಳು ಮುದ್ರಣರೂಪ ಪಡೆಯಿತು.
2. ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನೇಕ ಕೃತಿಗಳ ಅನುವಾದಿಸುವ ಕೆಲಸ ನಡೆಯಿತು.
3. ಕನ್ನಡ ಸಾಹಿತ್ಯ ರಚನೆ ಕಾರ್ಯ ನಡೆಯಿತು.
4. ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯ ಅಡಿಯಲ್ಲಿ ಬಿ. ಎಲ್ ರೈಸ್‌ರವರು ಕರ್ನಾಟಕದ ಸಾವಿರಾರು ಶಾಸನಗಳ ಸಂಪುಟಗಳು ಪ್ರಕಟವಾಯಿತು.
5. ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮಾಡಿದರು.
6. ಜೆ. ಎಫ್. ಫ್ಲೀಟ್ ಅಂತವರು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ ಜನಪದ ಕ್ಷೇತ್ರಕ್ಕೆ ಕೊಡುಗೆ ನೀಡಿದರು.
7. ಕ್ರಿ. ಶ. 1817ರಲ್ಲಿ ವಿಲಿಯಂ ರೀವ್ ಅವರಿಂದ ಪ್ರಥಮ ಶಬ್ದಕೋಶ ಪ್ರಕಟ. ಕಿಟೆಲ್ ಅಂತವರು ಕನ್ನಡ–ಇಂಗ್ಲೀಷ್ ನಿಘಂಟು ರಚನೆ ಸಾಧ್ಯವಾಯಿತು.
8. ಕನ್ನಡ ಪತ್ರಿಕೆಗಳ ಮುದ್ರಣ ಮತ್ತು ಪ್ರಕಟಣೆಗಳನ್ನು ಮಾಡಿದ ಹೆಗ್ಗಳಿಕೆ ಬಾಸೆಲ್ ಮಿಷನ್‌ಗೆ ಸಲ್ಲುತ್ತದೆ.

**ವಸಾಹತುಶಾಹಿ ಸಂದರ್ಭದ ಕನ್ನಡದ ಪತ್ರಿಕೆಗಳು**

ಕನ್ನಡದ ಪ್ರಥಮ ಪತ್ರಿಕೆ ಮಂಗಳೂರು ಸಮಾಚಾರವು 1843ರಲ್ಲಿ ಪ್ರಥಮ ವೃತ್ತಪತ್ರಿಕೆಯಾಗಿ ಪ್ರಾರಂಭವಾಯಿತು. ಇದರ ಹೆಗ್ಗಳಿಕೆ ಬಾಸೆಲ್ ಮಿಷನ್‌ಗೆ ಸಲ್ಲುತ್ತದೆ. ಇದರ ಸಂಪಾದಕರು ಹರ್ಮನ್ ಮೋಗ್ಲಿಂಗ್ ಆಗಿದ್ದರು. ಕನ್ನಡದ ವಾರ ಪತ್ರಿಕೆಯಾಗಿತ್ತು.

ಕನ್ನಡ ಸಮಾಚಾರ ಕನ್ನಡದ ಎರಡನೆಯ ಪತ್ರಿಕೆಯಾಗಿದೆ. 1844 ಜೂನ್, 1844 ನವೆಂಬರ್ ಪ್ರಾರಂಭವಾಯಿತು. ಇದನ್ನು ಬಳ್ಳಾರಿಯಲ್ಲಿರುವ ಛಾಪಖಾನೆಯಲ್ಲಿ ಅಚ್ಚುಪಡಿಸಲಾಗುತ್ತಿತ್ತು.

ಸುದ್ದಿ ಪ್ರಸಾರ ಮಾಡುವ ಉದ್ದೇಶದಿಂದ ಸುದ್ದಿಗಳಿಗಾಗಿಯೇ 1850ರಲ್ಲಿ ಬೆಂಗಳೂರಿನಲ್ಲಿ "ಮೈಸೂರು ವೃತ್ತಾಂತ ಬೋಧಿನಿ" ಪ್ರಾರಂಭವಾಯಿತು.

ಹೀಗೆ ಮಿಷನರಿ ವಲಯಗಳ ಮತ್ತು ಸರ್ಕಾರಿ ಮುದ್ರಣಾಲಯಗಳ ಕಾರ್ಯಚಟುವಟಿಕೆಗಳನ್ನು ನೋಡಿದ ಖಾಸಗಿ ವ್ಯಕ್ತಿಗಳು ಕೂಡ ಮುದ್ರಣಗೊಳಿಸುವ, ಪತ್ರಿಕೆಗಳನ್ನು ಪ್ರಾರಂಭಿಸುವ ಕೆಲಸಕ್ಕೆ ಮುಂದಾದರು. ಈ ನಿಟ್ಟಿನಲ್ಲಿ 'ಸುಬುದ್ಧಿ ಪ್ರಕಾಶ'ವೆಂಬ ಕನ್ನಡ ಪತ್ರಿಕೆ 1849ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾಯಿತು. ಈ ಮೊದಲು ಕರ್ನಾಟಕದಲ್ಲಿ ಖಾಸಗಿಯಾಗಿ ಕನ್ನಡ ಪುಸ್ತಕ ಅಥವಾ ಪತ್ರಿಕೆಯನ್ನು ಸ್ಥಾಪಿಸಿರಲಿಲ್ಲ. ಹಾಗಾಗಿ ಬೆಳಗಾವಿಯಲ್ಲಿ ಮೊದಲಿಗೆ ಕಲ್ಲಚ್ಚು ಕಂಡುಬಂದಿತೆನ್ನಬಹುದು. ಇಲ್ಲಿ ಕನ್ನಡ, ಮರಾಠೀ ಎರಡೂ ಭಾಷೆಗಳಲ್ಲಿ ಮುದ್ರಣ, ಗ್ರಂಥ ಪ್ರಕಟಣೆಗಳು ಮುಂದುವರೆಯಿತು. ತದನಂತರದಲ್ಲಿ ಧಾರವಾಡ ಜಿಲ್ಲೆಯ ಸವಣೂರ ಗ್ರಾಮದಲ್ಲಿ ಮುದ್ರಣೋದ್ಯಮವು ಪ್ರಾರಂಭವಾಯಿತು. ಕ್ರಿ. ಶ. 1860ರಲ್ಲಿ ಸವಣೂರ ಪ್ರೆಸ್ ಮತ್ತು ಜ್ಞಾನಬೋಧಕ ಪ್ರೆಸ್ ಖಾಸಗೀ ಮುದ್ರಣ ಸಂಸ್ಥೆಗಳು ಸ್ಥಾಪನೆಯಾದವು. (ಶ್ರೀನಿವಾಸ ಹಾವನೂರು–ಹೊಸಗನ್ನಡದ ಅರುಣೋದಯ ಪು. ಸಂ. 44)

ಪ್ರಾರಂಭದ ಪತ್ರಿಕೆಗಳು ಕ್ರೈಸ್ತ ಮಿಷನರಿಗಳ ಅಧೀನದಲ್ಲೇ ಇದ್ದರೂ ಕರ್ನಾಟಕ ಪ್ರಕಾಶಿಕಾ (1865), ವೃತ್ತಾಂತ ಚಿಂತಾಮಣಿ (1887), ಕನ್ನಡ ಕೇಸರಿ (1907) ಪತ್ರಿಕೆಗಳು ಪ್ರಜೆಗಳ ಕುಂದುಕೊರತೆಗಳನ್ನು, ಅವರಿಗೆ ಸಮಾಜದ ಬಗೆಗಿನ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡುತ್ತಿದ್ದವು.

ಕರ್ಣಾಟಕ ಕಾವ್ಯ ಮಂಜರಿ (1892) ಬೆಂಗಳೂರಿನಿಂದ ಪ್ರಕಟವಾದ ಮೊದಲ ಕನ್ನಡ ಸಾಹಿತ್ಯ ಪತ್ರಿಕೆಯಾಗಿದೆ. ಈ ಪತ್ರಿಕೆಯನ್ನು ಎಂ. ಎ ರಾಮಾನುಜ ಅಯ್ಯಂಗಾರ್ ಮತ್ತು ಎಸ್. ಜಿ ನರಸಿಂಹಚಾರ್ ಸಂಪಾದಕರಾಗಿದ್ದರು.

ಕಾವ್ಯ ಕಲ್ಪದ್ರುಮ (1897) ಈ ಪತ್ರಿಕೆಯು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಯಾಗಿತ್ತು.

ನಂಜನಗೂಡು ತಿರುಮಲಾಂಬ ಅವರು ಸನ್ಮಾರ್ಗ ದರ್ಶಿನಿ, ಕರ್ನಾಟಕ ನಂದಿನಿ ಎಂಬ ನಿಯತಕಾಲಿಕೆಗಳ ಸಂಪಾದಕಿಯಾಗಿದ್ದರು. ಈ ಮೂಲಕ ಮೊದಲ ಕನ್ನಡದ ಮಹಿಳಾ ಪ್ರಕಾಶಕಿ ಮತ್ತು ಪತ್ರಕರ್ತೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಹೀಗೆ 18 ಮತ್ತು 19ನೇ ಶತಮಾನದಲ್ಲಿ ಕನ್ನಡ ಸುವಾರ್ತಿಕ, ಕರ್ನಾಟಕ ಪತ್ರಿಕೆ, ಬಾಲಪತ್ರ, ಸತ್ಯ ದೀಪಕ ಮತ್ತು ಕ್ರೈಸ್ತ ಸಭಾಪತ್ರ ಎಂಬ ಹೆಸರಿನಿಂದ ಪ್ರಕಟವಾಗುತ್ತಿತ್ತು. ಕನ್ನಡ ಸಂದರ್ಭದಲ್ಲಿ ಪತ್ರಿಕೆಗಳ ಕುರಿತು ಹೇಳುವುದಾದರೆ ಸಾಹಿತ್ಯ ಪತ್ರಿಕೆಗಳು ಕನ್ನಡದಲ್ಲಿ ವೈವಿಧ್ಯವಾಗಿ ಮೂಡಿ ಬಂದಿವೆ. ದಿನ ಪತ್ರಿಕೆ, ವಾರ ಪತ್ರಿಕೆ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ ಹಲವು ರೀತಿಯಲ್ಲಿ ಪ್ರಕಟಗೊಂಡಿವೆ.

1. 1900ರಲ್ಲಿ ಬೆನಗಲ್ ರಾಮರಾವ್ ಅವರ ಸುಹಾಸಿನಿ ಪತ್ರಿಕೆ. ಪಂಜೆ ಅವರ ಆರಂಭದ ಕತೆಗಳು ಪ್ರಕಟಗೊಂಡದ್ದು ಈ ಪತ್ರಿಕೆಯಲ್ಲಿಯೇ.
2. 1904ರಲ್ಲಿ ಬಂದ ಸದ್ಬೋದಚಂದ್ರಿಕೆಯು ಗಳಗನಾಥರ ಕಾದಂಬರಿಗಳನ್ನು ಪ್ರಕಟಿಸಿತು.
3. ವಿ. ವೆಂಕಟಾಚಾರ್ಯರ ಅವಕಾಶತೋಷಿಣಿ ಪತ್ರಿಕೆಯ ಮೂಲಕ ಕಾದಂಬರಿಗಳು ಧಾರವಾಹಿಗಳ ರೀತಿಯಲ್ಲಿ ಪ್ರಕಟಗೊಳ್ಳುತ್ತಿದ್ದವು.
4. ಜಯಕರ್ನಾಟಕದ – ಕೀರ್ತಿನಾಥ ಕುರ್ತುಕೋಟಿ
5. ಎ. ಆರ್ ಕೃಷ್ಣಶಾಸ್ತ್ರಿಗಳ – ಪ್ರಬುದ್ಧಕರ್ನಾಟಕ

6. ಮಾಸ್ತಿ – ಜೀವನ
7. ಬೆಟಗೇರಿ ಕೃಷ್ಣಶರ್ಮ – ಜಯಂತಿ

19ನೇ ಶತಮಾನದಲ್ಲಿ ಪ್ರಾರಂಭವಾದ ಈ ಎಲ್ಲಾ ಪತ್ರಿಕೆಗಳನ್ನು ಗಮನಿಸಿದರೆ ಇದನ್ನು ಪ್ರಾರಂಭಿಸಿದವರು ಕನ್ನಡ ಸಾಹಿತ್ಯ ಲೋಕದ ಸಾಹಿತಿಗಳೇ ಆಗಿದ್ದಾರೆ. ಹಾಗಾಗಿ ಕವನ, ಕತೆ, ಕಾದಂಬರಿಗಳು ಪತ್ರಿಕೆಗಳ ಮೂಲಕ ಜನರಿಗೆ ತಲುಪಲು ಸುಲಭ ಸಾಧ್ಯವಾಯಿತು.

ಹೀಗೆ ಕ್ರೈಸ್ತ ಮಿಷನರಿಗಳು ಸಾಹಿತ್ಯ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಖ್ಯವಾಗಿ ಕನ್ನಡ ಗ್ರಂಥ ಮುದ್ರಣದಲ್ಲಿ ಮತ್ತು ಪತ್ರಿಕೆಗಳ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಮೈಸೂರು ವಿಶ್ವವಿದ್ಯಾನಿಲಯ, ವಿಶ್ವಕೋಶ
2. ಶ್ರೀನಿವಾಸ ಹಾವನೂರ – ಹೊಸಗನ್ನಡದ ಅರುಣೋದಯ, ಅಂಕಿತ ಪುಸ್ತಕ
3. ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ, ಸಂಪುಟ 1, ನವಕರ್ನಾಟಕ ಪ್ರಕಾಶನ.
4. ಎಲ್. ಎಸ್. ಶೇಷಗಿರಿ – ಹೊಸಗನ್ನಡದ ಸಾಹಿತ್ಯ ಚರಿತ್ರೆ, ನವಕರ್ನಾಟಕ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.